

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ

# ಸುತ್ತೂರು ವಾರ್ತೆ

ಖಾಸಗಿ ಪ್ರಸಾರ ಸಂಪುಟ : 14 ಸಂಚಿಕೆ : 1 ಪುಟ 8 | ಸುತ್ತೂರು ಶ್ರೀಕ್ಷೇತ್ರ | ಸೋಮವಾರ, 20 ಜನವರಿ 2020


# ಜಾತ್ರೆಗೆ ಶ್ರೀಕಾರ; ಸುತ್ತೂರು ಸಿಂಗಾರ

**ಸುತ್ತೂರು ಶ್ರೀಕ್ಷೇತ್ರ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಇದೇ ಜನವರಿ 21 ಮಂಗಳವಾರದಿಂದ 26 ಭಾನುವಾರದವರೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ.**



ಜಾತ್ರಾ ಮಹೋತ್ಸವದ ಸಿದ್ಧತೆಗಳನ್ನು ಪರಿಶೀಲಿಸಿದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕೃಷಿಮೇಳವನ್ನು ವೀಕ್ಷಿಸುತ್ತಿರುವುದು.

ಆರು ದಿನಗಳ ಕಾಲ ನಡೆಯುವ ಈ ಜಾತ್ರಾ ಮಹೋತ್ಸವದಲ್ಲಿ ಜನವರಿ 21 ರಂದು ವೀರಭದ್ರೇಶ್ವರ ಕೊಂಡೋತ್ಸವ, 23 ರಂದು ರಥೋತ್ಸವ, 24 ರಂದು ಮಹದೇಶ್ವರ ಕೊಂಡೋತ್ಸವ, 25 ರಂದು ತೆಪ್ಪೋತ್ಸವಗಳ ಜೊತೆಗೆ ಲಕ್ಷದೀಪೋತ್ಸವ, ಹಾಲ್ಹರವಿ ಉತ್ಸವ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು, ವೈವಿಧ್ಯಮಯ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಕ್ರೀಡಾ ಚಟುವಟಿಕೆಗಳು ಜರುಗಲಿವೆ.



**ಪ್ರತಿಷ್ಠಾಪನೆ:** ಜನವರಿ 22 ಬುಧವಾರದಂದು ಕರ್ತೃಗದ್ದುಗೆಯಲ್ಲಿ ಶ್ರೀ ನಂಜುಂಡೇಶ್ವರ, ನಂದಿ ಹಾಗೂ ವಿನಾಯಕ ಮೂರ್ತಿಗಳ ಪುನರ್ ಪ್ರತಿಷ್ಠಾಪನೆ ಮಾಡಲಾಗುತ್ತದೆ.

**ಭಜನಾ ಮೇಳ:** ಈ ವರ್ಷ 28ನೇ ರಾಜ್ಯಮಟ್ಟದ ಭಜನಾ ಮತ್ತು ಏಕತಾರಿ ಸ್ಪರ್ಧೆ ನಡೆಯಲಿದೆ. ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಸುಮಾರು 700 ಕ್ಕೂ ಹೆಚ್ಚು ಪುರುಷ, ಮಹಿಳಾ, ಮಕ್ಕಳ ತಂಡಗಳು ಭಾಗವಹಿಸುವ ನಿರೀಕ್ಷೆ ಇದೆ. ಒಟ್ಟು ಏಳು ವಿಭಾಗಗಳಲ್ಲಿ ಈ ಸ್ಪರ್ಧೆ ನಡೆಯಲಿದ್ದು. ಪ್ರತಿ ವಿಭಾಗಕ್ಕೂ ಪ್ರತ್ಯೇಕ ಬಹುಮಾನಗಳನ್ನು ನೀಡಲಾಗುವುದು.

**ವಸ್ತುಪ್ರದರ್ಶನ:** ಜಾತ್ರೆಯ ಪ್ರಮುಖ ಆಕರ್ಷಣೆಯಾದ ವಸ್ತುಪ್ರದರ್ಶನದಲ್ಲಿ ಕೈಗಾರಿಕೋತ್ಪನ್ನಗಳು, ಕೈಮಗ್ಗ, ಜವಳಿ, ಕರಕುಶಲ ಉತ್ಪನ್ನಗಳು, ಗ್ರಾಮೀಣ ಉತ್ಪನ್ನಗಳು, ಸ್ವಸಹಾಯ ಸಂಘಗಳು, ಸ್ತ್ರೀಶಕ್ತಿ ಸಂಘಗಳು ತಯಾರಿಸಿದ ಗೃಹಬಳಕೆ ಉತ್ಪನ್ನಗಳು ಹಾಗೂ ಗುಡಿ ಕೈಗಾರಿಕೆ ವಸ್ತುಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಇರುತ್ತದೆ. ಜೆಎಸ್‌ಎಸ್ ಪ್ರೌಢಶಾಲೆಗಳ ವಿದ್ಯಾರ್ಥಿಗಳು ಸಿದ್ಧಪಡಿಸಿರುವ 200 ಕ್ಕೂ ಹೆಚ್ಚು ಶಿಕ್ಷಣ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದ ಮಾದರಿಗಳಿರುತ್ತವೆ. ಸರ್ಕಾರದ ಅಭಿವೃದ್ಧಿ ಇಲಾಖೆಗಳು, ಕೈಗಾರಿಕಾ ಸಂಸ್ಥೆಗಳು ಹಾಗೂ ಮಹಿಳಾ ಉದ್ಯಮಿಗಳು ಪಾಲ್ಗೊಳ್ಳಲಿದ್ದಾರೆ. ವೈದ್ಯಕೀಯ ಹಾಗೂ ತಾಂತ್ರಿಕ ವಸ್ತುಪ್ರದರ್ಶನವು ಇರುತ್ತದೆ.




**ಕೃಷಿ ಮೇಳ:** ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ತಾಂತ್ರಿಕತೆಯ ಬಗ್ಗೆ ರೈತರಿಗೆ ಮಾಹಿತಿ ನೀಡಲು ಈ ಮೇಳವನ್ನು ಆಯೋಜಿಸಲಾಗಿದೆ. ಸಮಗ್ರ ಬೆಳೆ ನಿರ್ವಹಣೆ, ವೈವಿಧ್ಯಮಯ ಬೆಳೆಗಳ ಪ್ರಾತ್ಯಕ್ಷಿಕೆ ಇರುತ್ತದೆ. ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಹಾಗೂ ಮಾರಾಟದ ವ್ಯವಸ್ಥೆ ಮಾಡಲಾಗಿದೆ. ಹನಿ ನೀರಾವರಿಯಲ್ಲಿ ಬತ್ತ ಬೆಳೆಯುವ ಪ್ರಾತ್ಯಕ್ಷಿಕೆ, ಒಂದು ಎಕರೆಯಲ್ಲಿ "ಕೃಷಿ ಬ್ರಹ್ಮಾಂಡ" ಪ್ರದರ್ಶನ, ಸಿರಿಧಾನ್ಯಗಳು, ದ್ವಿದಳ ಧಾನ್ಯಗಳ ವಿವಿಧ ತಳಿಗಳ ಪ್ರದರ್ಶನವಿರುತ್ತದೆ. ಅತಿ ಹೆಚ್ಚು ಸಸಾರಜನಕ, ಶರ್ಕರ, ಪಿಷ್ಟ ಹಾಗೂ ನಾರು ಹೊಂದಿರುವ ವಿದೇಶಿ ಬೆಳೆಗಳಾದ ಚಿಯಾ ಮತ್ತು ಟೆಫ್‌ಗಳ ಪ್ರದರ್ಶನವಿರುತ್ತದೆ. ಹಸು, ಕುರಿ, ಮೇಕೆ, ಕೋಳಿಗಳ ದೇಸಿ ತಳಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

**ಕೃಷಿ ವಿಚಾರ ಸಂಕಿರಣ:** 24 ಶುಕ್ರವಾರದಂದು ಸಾವಯವ ಕೃಷಿ ಮತ್ತು ಜಲ ವೈಜ್ಞಾನಿಕ ಬಳಕೆ ಕುರಿತು ಕೃಷಿ ವಿಚಾರ ಸಂಕಿರಣ ಏರ್ಪಡಿಸಲಾಗಿದೆ.

ವಸ್ತುಪ್ರದರ್ಶನ | ಕೃಷಿ ಮೇಳ | ಸಾಮೂಹಿಕ ವಿವಾಹ | ಭಜನಾಮೇಳ | ರಥೋತ್ಸವ



ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಸಂಸ್ಥಾಪನಾಚಾರ್ಯ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಗದ್ದುಗೆ

ಸಾಂಸ್ಕೃತಿಕ ಮೇಳ | ದೇಸಿ ಆಟಗಳು | ದೋಣಿ ವಿಹಾರ | ಕುಸ್ತಿ ಪಂದ್ಯಾವಳಿ | ರಂಗೋಲಿ ಸ್ಪರ್ಧೆ




**ಜಾತ್ರಾ ಮಹೋತ್ಸವದ ಮಾಧ್ಯಮ ಗೋಷ್ಠಿಯಲ್ಲಿ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್ ಮಾಹಿತಿ ನೀಡಿದರು. ಚಿತ್ರದಲ್ಲಿ ಶ್ರೀ ಎಸ್.ಪಿ. ಉದಯಶಂಕರ್, ಶ್ರೀ ಎಸ್. ಶಿವಕುಮಾರಸ್ವಾಮಿ ಹಾಗೂ ಶ್ರೀ ಬೊಕ್ಕಳ್ಳಿ ಸುಬ್ಬಪ್ಪ ಅವರು ಇದ್ದಾರೆ.**

# 22 ರಂದು ಉಚಿತ ಸಾಮೂಹಿಕ ವಿವಾಹ



ಜಾತ್ರಾ ಮಹೋತ್ಸವದ ಅಂಗವಾಗಿ 22 ರಂದು ನಡೆಯುವ ಉಚಿತ ಸಾಮೂಹಿಕ ವಿವಾಹದಲ್ಲಿ ಜಾತಿ–ಮತ ಭೇದವಿಲ್ಲದೆ ಸರ್ವ ಧರ್ಮಗಳ ಎಲ್ಲರಿಗೂ ಮುಕ್ತ ಅವಕಾಶ ಕಲ್ಪಿಸಲಾಗಿದೆ. ಸಾಮೂಹಿಕ ವಿವಾಹದಲ್ಲಿ ಅಂತರ್ಜಾತಿ, ವಿಶೇಷ ಚೇತನರು ಹಾಗೂ ಹೊರ ರಾಜ್ಯಗಳ ವಧೂ–ವರರು ಸಹ ಪಾಲ್ಗೊಳ್ಳಲಿದ್ದಾರೆ.

ವಿವಾಹಗಳ ನೋಂದಣಿಯನ್ನು ಮಾಡಿಸಲಾಗುತ್ತದೆ. ವಧುವಿಗೆ ಸೀರೆ, ಕುಪ್ಪಸ, ಮಾಂಗಲ್ಯ ಹಾಗೂ ಕಾಲುಂಗುರಗಳನ್ನು, ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ನೀಡಲಾಗುತ್ತದೆ. ಸಾಮೂಹಿಕ ವಿವಾಹ ವ್ಯವಸ್ಥೆಯಲ್ಲಿ ಈವರೆಗೆ 2,900ಕ್ಕೂ ಹೆಚ್ಚು ಮಂದಿ ದಂಪತಿಗಳಾಗಿದ್ದಾರೆ. ವಧೂ–ವರರು ವಿವಾಹದ ದೃಢೀಕರಣಪತ್ರ ಹಾಗೂ ನೋಂದಣಿಪತ್ರಗಳನ್ನು ಸಲ್ಲಿಸಿ, ಸರ್ಕಾರ ನೀಡುವ ಪ್ರೋತ್ಸಾಹಧನವನ್ನು ಸ್ವಂತ ಜವಾಬ್ದಾರಿಯಿಂದ ಪಡೆದುಕೊಳ್ಳಬಹುದಾಗಿದೆ.

# ಜಾತ್ರೆಗೆ ವಿಶೇಷ ಸಾರಿಗೆ ಸೌಲಭ್ಯ

ಜನವರಿ 21 ರಿಂದ 26 ರವರೆಗೆ ಸುತ್ತೂರಿನಲ್ಲಿ ನಡೆಯಲಿರುವ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವಕ್ಕೆ ಹೋಗಿ ಬರುವವರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ ಮೈಸೂರು ನಗರಸಾರಿಗೆ ವಿಭಾಗವು ವಿವಿಧೆಡೆಯಿಂದ ಸುತ್ತೂರಿಗೆ ಹೆಚ್ಚುವರಿ ಬಸ್ ಸೌಲಭ್ಯವನ್ನು ಕಲ್ಪಿಸಿದ್ದಾರೆ.



ನಗರಸಾರಿಗೆ ವೋಲ್ವೋ ಮತ್ತು ಸಾಮಾನ್ಯ ಬಸ್‌ಗಳು ಈ ಕೆಳಕಂಡಂತೆ ಸಂಚರಿಸಲಿವೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

ರೈಲ್ವೆ ನಿಲ್ದಾಣ–ನಗರ ನಿಲ್ದಾಣ–ಆಲನಹಳ್ಳಿ–ವರುಣ, ಹೊಸಕೋಟೆ–ಸುತ್ತೂರು. ನಗರ ಬಸ್ ನಿಲ್ದಾಣ–ಆಲನಹಳ್ಳಿ–ವರುಣ, ಹೊಸಕೋಟೆ–ಸುತ್ತೂರು. ನಗರ ಬಸ್ ನಿಲ್ದಾಣ–ಹೊಸಹುಂಡಿ–ದೇವಲಾಪುರ–ಆಯರಹಳ್ಳಿ–ಸುತ್ತೂರು. ಸಾರ್ವಜನಿಕ ಪ್ರಯಾಣಿಕರು ಈ ಸಾರಿಗೆಯ ಸದುಪಯೋಗವನ್ನು ಪಡೆದುಕೊಳ್ಳಬಹುದಾಗಿದೆ. ಇದಲ್ಲದೆ ಖಾಸಗಿ ಬಸ್ಸುಗಳು ಸಹ ನಂಜನಗೂಡು ಮತ್ತು ಟಿ. ನರಸೀಪುರದಿಂದ ಸುತ್ತೂರು ಶ್ರೀಕ್ಷೇತ್ರಕ್ಕೆ ಸಂಚರಿಸಲಿವೆ.

# ಜಾತ್ರೆಯಲ್ಲಿ ಖುಷಿ ತರುವ ಕೃಷಿ ಬ್ರಹ್ಮಾಂಡ

ಜಾತ್ರೆಯ ವಿಶೇಷಗಳಲ್ಲಿ ಒಂದಾದ ಕೃಷಿಮೇಳವು ಈ ವರ್ಷವು ಸಹ ವೈವಿಧ್ಯಮಯವಾಗಿ ಜನಮನ ಸೆಳೆಯುವಂತಿದೆ. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಹಾಯದೊಂದಿಗೆ ಆಯೋಜಿಸಲ್ಪಟ್ಟಿರುವ ಕೃಷಿಮೇಳದಲ್ಲಿ ದೇಶ ವಿದೇಶಿಯ ತರಕಾರಿ ಮತ್ತು ಹೂ ತಳಿಗಳು ಸಿರಿದಾನ್ಯಗಳು ಕ್ಷೇತ್ರ ಬೆಳೆಗಳು ಆಧುನಿಕ ಕೃಷಿ ಯಂತ್ರೋಪಕರಣ, ಕೀಟ ನಾಶಕ, ರಸಗೊಬ್ಬರ ಹಾಗೂ ಪಶುಸಂಗೋಪನೆ ಪ್ರದರ್ಶನವನ್ನು ಆಯೋಜಿಸಲಾಗಿದೆ.



ಒಂದು ಎಕರೆಯಲ್ಲಿ ಸುಮಾರು 117 ಬೆಳೆಗಳನ್ನು ಬೆಳೆದಿರುವ, ಇಲ್ಲಿ 16 ವಿವಿಧ ದೀರ್ಘಾವಧಿ ಬೆಳೆ, 92 ಅಲ್ಪಾವಧಿ ಬೆಳೆಗಳನ್ನು 30 ವಿವಿಧ ತರಕಾರಿ ಬೆಳೆಗಳನ್ನು ಬೆಳೆಯಲ್ಪಟ್ಟಿದೆ 16 ವಿದೇಶಿ ತರಕಾರಿ ಬೆಳೆಗಳು 7 ಪಾರಂಪರಿಕ ಬೆಳೆಗಳು ಬೆಳೆದಿರುವುದು ರೈತರಿಗೆ ಅದರ ಬಗ್ಗೆ ತಿಳಿಯಲು ಸಹಾಯಕವಾಗಿದೆ. ಈ ಬಾರಿ ವಿಶೇಷವಾಗಿ ಜೇನು ಸಾಕಾಣಿಕೆ, ಹನಿ ನೀರಾವರಿ ಹಾಗೂ ದೇಶ ವಿದೇಶಿ ತಳಿಗಳನ್ನು ಯಾವುದೇ ರಾಸಾಯನಿಕ ಬಳಸದೆ ಬೆಳೆಯಲಾಗಿದೆ. ಕರ್ನಾಟಕದಲ್ಲೇ ಮೊಟ್ಟ ಮೊದಲ ಬಾರಿಗೆ ಭತ್ತವನ್ನು ಹನಿ ನೀರಾವರಿ ಮೂಲಕ ಬೆಳೆಸಲಾಗಿದೆ.

ಕಳೆದ 4 ತಿಂಗಳಿಂದ ಸುಮಾರು 20 ಅನುಭವಿ ರೈತರು ಹಾಗೂ 3 ಕೃಷಿ ವಿಜ್ಞಾನಿಗಳ ಪರಿಶ್ರಮದೊಂದಿಗೆ ಈ ಕೃಷಿಮೇಳವನ್ನು ಆಯೋಜಿಸಲಾಗಿದೆ. ಶ್ರೀಗಳ ಅಭಿಲಾಷೆಯಂತೆ ಕೃಷಿಯಲ್ಲಿರುವ ಯಶಸ್ವಿ ತಳಿಗಳನ್ನು ಕೃಷಿಕರಿಗೆ ತಿಳಿಸುವುದರೊಂದಿಗೆ ಅವರನ್ನು ಪ್ರೇರೇಪಿಸುವ ಕಾರ್ಯ ನಡೆಯುತ್ತಿದೆ. ರೈತರಿಗೆ ಅಷ್ಟೇ ಅಲ್ಲದೆ ಆಧುನಿಕ ವಿದ್ಯಾರ್ಥಿಗಳಲ್ಲಿಯೂ ಕೃಷಿಯ ಬಗ್ಗೆ ಆಸಕ್ತಿ ಮೂಡಿಸುವುದು ಅಲ್ಲದೇ ವ್ಯವಸಾಯದಲ್ಲಿ ಯಶಸ್ವಿ ಮಾರ್ಗಗಳ ಬಗ್ಗೆ ತಿಳಿಸುವುದು ಈ ಕೃಷಿ ಬ್ರಹ್ಮಾಂಡದ ಉದ್ದೇಶವಾಗಿದೆ ಎಂದು ಕೃಷಿಮೇಳದ ಸಮಿತಿಯ ಮುಖ್ಯಸ್ಥರು ಮಾಹಿತಿ ನೀಡಿದರು.

– ಆತಿಷ, ರಕ್ಷಿತಾ, ಮಾಧುರಿ, ಸಂಕ್ರಾಂತಿ

# 12 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಪ್ರಚಾರ ರಥ ಸಂಚಾರ

ಡಿ.10 ರಂದು ಸುತ್ತೂರಿನಿಂದ ಹೊರಟ ಜಾತ್ರಾ ಪ್ರಚಾರ ರಥೋತ್ಸವ ಜನವರಿ 20ರಂದು ಸುತ್ತೂರಿಗೆ ಆಗಮಿಸಲಿದೆ. ಒಟ್ಟು 40 ದಿನಗಳ ಯಾತ್ರೆಯಲ್ಲಿ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಕೊಡಗು, ಕೋಲಾರ ಸೇರಿದಂತೆ 12 ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸುಮಾರು 6000 ಕ್ಕೂ ಹೆಚ್ಚು ಕಿ.ಮೀ ಸಂಚರಿಸಿ ಜಾತ್ರೆಯ ಬಗ್ಗೆ ಪ್ರಚಾರ ಮಾಡಲಿದೆ.

ಪ್ರಚಾರದ ರಥದಲ್ಲಿ ಎಲ್‌ಇಡಿ ಟಿ.ವಿ.ಗಳನ್ನು ಅಳವಡಿಸಿದ್ದು. ಗ್ರಾಮಗಳಲ್ಲಿ ಜಾತ್ರೆಯ ಬಗ್ಗೆ ಜನರಿಗೆ ತಿಳಸಲಾಯಿತು. ಪ್ರತಿ ಗ್ರಾಮಗಳಲ್ಲಿ ಕರಪತ್ರಗಳ ವಿತರಣೆ, ಪೋಸ್ಟರ್‌ಗಳನ್ನು ಅಂಟಿಸುವುದು ಸೇರಿದಂತೆ, ಮುಖಂಡರು ಜಾತ್ರೆ ಕುರಿತು ಮಾಹಿತಿ ನೀಡಿ ಜಾತ್ರೆಗೆ ಆಗಮಿಸುವಂತೆ ಮನವಿಯನ್ನೂ ಮಾಡಲಾಯಿತು. ಪ್ರತಿ ಗ್ರಾಮಗಳಲ್ಲೂ ರಥಕ್ಕೆ ಅದ್ಧೂರಿ ಸ್ವಾಗತ ಸಿಗುತ್ತಿತ್ತು ಎನ್ನುತ್ತಾರೆ ಇದರ ಉಸ್ತುವಾರಿ ಹೊತ್ತಿರುವ ಪಂಚಾಕ್ಷರಿಯವರು.




**ಜಾತ್ರಾ ಮಹೋತ್ಸವದ ಪ್ರಚಾರ ರಥಕ್ಕೆ ಚಾಲನೆ ನೀಡಿದ ಸಂದರ್ಭ: ಜಗದ್ಗುರುಗಳವರು, ವಿವಿಧ ಮಠಗಳ ಶ್ರೀಗಳು, ಸಮಿತಿಗಳ ಸಂಚಾಲಕರು ಹಾಗೂ ಸದಸ್ಯರುಗಳಿದ್ದಾರೆ.**

## ಸುತ್ತೂರು ಶ್ರೀಮಠದ ಜಗದ್ಗುರುಗಳ ಪರಂಪರೆ



1. ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿ ಮಹಾಸ್ವಾಮಿಗಳು
2. ಜಗದ್ಗುರು ಶ್ರೀ ಈಶಾನೇಶ್ವರ ಒಡೆಯರ್ ಮಹಾಸ್ವಾಮಿಗಳು
3. ಜಗದ್ಗುರು ಶ್ರೀ ನಿಜಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು
4. ಜಗದ್ಗುರು ಶ್ರೀ ಸಿದ್ಧನಂಜ ದೇಶಿಕೇಂದ್ರ ಮಹಾಸ್ವಾಮಿಗಳು
5. ಜಗದ್ಗುರು ಶ್ರೀ ಕಪಿನಿ ನಂಜುಂಡ ದೇಶಿಕೇಂದ್ರ ಮಹಾಸ್ವಾಮಿಗಳು
6. ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಮಹಾಸ್ವಾಮಿಗಳು
7. ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು
8. ಜಗದ್ಗುರು ಶ್ರೀ ಪರ್ವತೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು
9. ಜಗದ್ಗುರು ಶ್ರೀ ಭಂಡಾರಿ ಬಸಪ್ಪ ಒಡೆಯರ್ ಮಹಾಸ್ವಾಮಿಗಳು
10. ಜಗದ್ಗುರು ಶ್ರೀ ಕೂಗಲೂರು ನಂಜುಂಡ ದೇಶಿಕೇಂದ್ರ ಮಹಾಸ್ವಾಮಿಗಳ
11. ಜಗದ್ಗುರು ಶ್ರೀ ಘನಲಿಂಗದೇವ ಮಹಾಸ್ವಾಮಿಗಳು
12. ಜಗದ್ಗುರು ಶ್ರೀ ಇಮ್ಮಡಿ ಶಿವರಾತ್ರೀಶ್ವರ ಮಹಾಸ್ವಾಮಿಗಳು
13. ಜಗದ್ಗುರು ಶ್ರೀ ಚನ್ನಬಸವ ದೇಶಿಕೇಂದ್ರ ಮಹಾಸ್ವಾಮಿಗಳು
14. ಜಗದ್ಗುರು ಶ್ರೀ ಗುರುನಂಜ ದೇಶಿಕೇಂದ್ರ ಮಹಾಸ್ವಾಮಿಗಳು
15. ಜಗದ್ಗುರು ಶ್ರೀ ಗುರುಚನ್ನಬಸವಾಚಾರ್ಯ ಮಹಾಸ್ವಾಮಿಗಳು
16. ಜಗದ್ಗುರು ಶ್ರೀ ಗುರುಪಂಚಾಕ್ಷರ ದೇಶಿಕೇಂದ್ರ ಮಹಾಸ್ವಾಮಿಗಳು
17. ಜಗದ್ಗುರು ಶ್ರೀ ಚಿದ್ಘನ ಶಿವಾಚಾರ್ಯ ಮಹಾಸ್ವಾಮಿಗಳು
18. ಜಗದ್ಗುರು ಶ್ರೀ ಚನ್ನವೀರ ದೇಶಿಕೇಂದ್ರ ಮಹಾಸ್ವಾಮಿಗಳು
19. ಜಗದ್ಗುರು ಶ್ರೀ ಮಹಾತ್ಮ ದೇಶಿಕೇಂದ್ರ ಮಹಾಸ್ವಾಮಿಗಳು
20. ಜಗದ್ಗುರು ಶ್ರೀ ಸಿದ್ಧಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು
21. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
22. ಜಗದ್ಗುರು ಮಂತ್ರಮಹರ್ಷಿ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು
23. ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು
24. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

## ಪೂಜೆ ಮತ್ತು ಸೇವಾ ಕೈಂಕರ್ಯಗಳು

ಜಾತ್ರಾ ಮಹೋತ್ಸವದ ಈ ಸಂದರ್ಭದಲ್ಲಿ ಸೇವಾರ್ಥದಾರರಿಂದ ಶ್ರೀ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಗದ್ದುಗೆ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ ಹಾಗೂ ಶ್ರೀ ನಾರಾಯಣಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ಹಾಗೂ ಉತ್ಸವಗಳು ನೆರವೇರುತ್ತವೆ.

ಸೇವಾ ಕೈಂಕರ್ಯಗಳನ್ನು ಸಲ್ಲಿಸಲು ಅಪೇಕ್ಷಿಸುವ ಭಕ್ತಾದಿಗಳು ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ನೇರವಾಗಿ ಅಥವಾ ದೂರವಾಣಿ ಮೂಲಕ ಸುತ್ತೂರು ಶ್ರೀಕ್ಷೇತ್ರ ಅಥವಾ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವ ಕಛೇರಿಯಲ್ಲಿ ನೇರವಾಗಿ ಅಥವಾ 08221-232223, 08221-232323, 0821-2548212-122 ಈ ದೂರವಾಣಿಗಳಲ್ಲಿ ಸಂಪರ್ಕಿಸಬಹುದಾಗಿದೆ.



ಗದ್ದುಗೆಯ ಆವರಣದಲ್ಲಿ ವಿದ್ಯಾರ್ಥಿಗಳಿಂದ ಸಾಮೂಹಿಕ ಪ್ರಾರ್ಥನೆ

## ಶಾಂತಿ, ಸಂಯಮ, ಸಹಬಾಳ್ವೆ ಸಾರಿದ ಶ್ರೀಮಠ

ಸುತ್ತೂರಿನ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳ ಶ್ರೀಮಠಕ್ಕೆ ಸುಮಾರು ಹತ್ತು ಶತಮಾನಗಳ ಇತಿಹಾಸವಿದೆ. ಶ್ರೀಕ್ಷೇತ್ರ ಶಾಂತಿ, ಸಂಯಮ, ಸಹಬಾಳ್ವೆಯನ್ನು ನಾಡಿಗೆ ಸಾರಿದ ಧಾರ್ಮಿಕ ಕ್ಷೇತ್ರವೂ ಹೌದು. ಇದಕ್ಕೆ ಪೂರಕವಾದ ಹಿನ್ನೆಲೆಯಿದೆ.

ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ರಾಜರ ಆಡಳಿತವಿದ್ದ ದಿನಗಳು. ಎಲ್ಲೆಡೆಯೂ ರಾಜ್ಯ ವಿಸ್ತರಣೆಗಾಗಿ ರಾಜರುಗಳ ನಡುವೆ ಹೋರಾಟ ನಡೆಯುತ್ತಿತ್ತು. ಆಗಾಗ್ಗೆ ರಾಜರುಗಳು ದಂಡೆಯಾತ್ರೆ ಕೈಗೊಳ್ಳುತ್ತಿದ್ದರು. ಒಬ್ಬ ರಾಜನ ಮೇಲೆ ಮೊತ್ತೊಬ್ಬ ರಾಜ ಯುದ್ಧ ಸಾರುತ್ತಾ ಯುದ್ಧ ಮಾಡುವುದರಲ್ಲಿಯೇ ದಿನ ಕಳೆಯುತ್ತಿದ್ದರು. ಅದರಂತೆ ಆಗಿನ ಕಂಚಿಯ ರಾಜೇಂದ್ರ ಚೋಳನೂ ಹಾಗೂ ತಲಕಾಡಿನ ಗಂಗರಾಜ ರಾಚಮಲ್ಲ ಇಬ್ಬರು ವೈರಿಗಳಾಗಿದ್ದರು. ಇವರಿಬ್ಬರ ನಡುವೆ ಆಗಾಗ್ಗೆ ಯುದ್ಧಗಳು ನಡೆಯುತ್ತಿದ್ದವು.

ಒಮ್ಮೆ ಇವರಿಬ್ಬರು ಭಾರೀ ಸೈನ್ಯದೊಂದಿಗೆ ಯುದ್ಧಕ್ಕೆ ಸಜ್ಜಾಗುತ್ತಾರೆ. ಆಗ ರಾಜೇಂದ್ರ ಚೋಳ ಏರಿ ಹೊರಟಿದ್ದ ಕುದುರೆ ಗೊತ್ತುಗುರಿಯಿಲ್ಲದೆ ಓಡತೊಡಗಿತ್ತು. ಏನೇ ಮಾಡಿದರೂ ಕುದುರೆಯನ್ನು ತಡೆದು ನಿಲ್ಲಿಸುವುದಕ್ಕೆ ರಾಜನಿಗೆ ಸಾಧ್ಯವಾಗಲಿಲ್ಲ. ಹಾಗೆ ಓಡಿದ ಕುದುರೆ ಕಪಿಲಾ ನದಿ ತೀರದಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳಿಗೆ ಪ್ರದಕ್ಷಿಣೆ ಹಾಕಿ ನಿಂತಿತು. ಇದರಿಂದ ಅಚ್ಚರಿಗೊಂಡ ರಾಜ ರಾಜೇಂದ್ರ ಚೋಳ ಕುದುರೆಯಿಂದ ಇಳಿದು ಧ್ಯಾನದಲ್ಲಿ ನಿರತರಾಗಿದ್ದ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಪಾದಕ್ಕೆರಗುತ್ತಾನೆ.

ಅದೇ ವೇಳೆಗೆ ರಾಜೇಂದ್ರ ಚೋಳನ ಕುದುರೆಯನ್ನು ಹಿಂಬಾಲಿಸಿಕೊಂಡು ರಾಚಮಲ್ಲನೂ ಅಲ್ಲಿಗೆ ಬರುತ್ತಾನೆ. ತನ್ನ ಮುಂದೆ ಬಂದು ನಿಂತ ರಾಜರಿಬ್ಬರನ್ನು ಕಂಡ ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳು ಅವರಿಬ್ಬರಿಗೆ ವೈರತ್ವವನ್ನು ಬಿಟ್ಟು ಸಹಬಾಳ್ವೆ ನಡೆಸುವಂತೆಯೂ, ಅಲ್ಲದೆ ಯುದ್ಧದಿಂದ ಆಗುವ ಸಾವು ನೋವುಗಳ ಬಗ್ಗೆ ಮನವರಿಕೆ ಮಾಡಿಕೊಡುತ್ತಾರೆ. ಆ ಕ್ಷಣ ಅವರಿಬ್ಬರಲ್ಲಿದ್ದ ದ್ವೇಷದ ಅಗ್ನಿ ತಣ್ಣಗಾಗಿ ಯುದ್ಧೋನ್ಮದ ಇಳಿಯುತ್ತದೆ. ಮಾನವತೆಯ ಮಹಾಬೆಳಕು ಪ್ರಜ್ವಲಿಸಿ ಅವರಲ್ಲಿ ಪರಿವರ್ತನೆಯ ಹೂವು ಅರಳಿ ರಾಜರೀರ್ವರೂ ಯುದ್ಧಕ್ಕೆ ತಿಲಾಂಜಲಿ ಹೇಳುತ್ತಾರೆ ಮತ್ತು ತಮಗೆ ದರ್ಶನ ನೀಡಿದ ಈ ಪುಣ್ಯ ಸ್ಥಳದಲ್ಲಿಯೇ ತಾವು ನೆಲೆಗೊಳ್ಳಬೇಕೆಂದು ಶ್ರೀ ಶಿವರಾತ್ರಿ ಶಿವಯೋಗಿಗಳಲ್ಲಿ ಕೋರಿಕೊಂಡಾಗ ಶ್ರೀಗಳು ಸುತ್ತೂರಿನಲ್ಲೇ ನೆಲೆಸುವಂತೆ ಮಾಡುತ್ತಾರೆ.

ಈ ಧಾರ್ಮಿಕ ಸ್ಥಳವೇ ಸುತ್ತೂರು ಕ್ಷೇತ್ರ. ಶ್ರೀಕ್ಷೇತ್ರ ಸಾಮಾಜಿಕ ಹಾಗೂ ಶಿಕ್ಷಣ ಕ್ಷೇತ್ರದಲ್ಲೂ ಹಿಂದೆ ಬಿದ್ದಿಲ್ಲ. ಶಿಶುವಿಹಾರದಿಂದ ಹಿಡಿದು ವೈದ್ಯಕೀಯ, ತಾಂತ್ರಿಕ ಕಾಲೇಜುಗಳ ತನಕ ಎಲ್ಲಾ ಬಗೆಯ ಉನ್ನತ ಶಿಕ್ಷಣಗಳೂ ಇಲ್ಲಿ ಲಭ್ಯವಿದೆ.

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ






# ಜಾತ್ರೆಯಲ್ಲಿ ಜನಾಕರ್ಷಕ ವಸ್ತುಪ್ರದರ್ಶನ

ವಸ್ತುಪ್ರದರ್ಶನದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ವತಿಯಿಂದ ಕೃಷಿ, ವಿಜ್ಞಾನ, ತಂತ್ರಜ್ಞಾನ, ಶೈಕ್ಷಣಿಕ, ಆರೋಗ್ಯ ಮತ್ತು ಕಲೆಗೆ ಸಂಬಂಧಿಸಿದಂತೆ ಪ್ರದರ್ಶನಗಳಿರುತ್ತವೆ. ಸರ್ಕಾರದ ಅಭಿವೃದ್ಧಿ ಇಲಾಖೆಗಳು, ಕೈಗಾರಿಕೆಗಳು, ಕೈಮಗ್ಗ/ಜವಳಿ ನೇಕಾರರ ಸಹಕಾರ ಸಂಘಗಳು, ಮಹಿಳಾ ಅಭಿವೃದ್ಧಿ ನಿಗಮ ಮತ್ತು ನಬಾರ್ಡ್ ಪ್ರಾಯೋಜಿತ ಉದ್ಯಮಿಗಳು ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಗೃಹಪಯೋಗಿ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ ಇರುತ್ತದೆ. ಪ್ರತಿದಿನ ಬೆಳಗಿನಿಂದ ಸಂಜೆಯ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

350ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶವಿದೆ. ಉದ್ಯಮಿಗಳು, ಕುಶಲಕರ್ಮಿಗಳು, ಪ್ರಕಾಶಕರು ಮತ್ತು ಮಾರಾಟಗಾರರು ವಸ್ತುಪ್ರದರ್ಶನದಲ್ಲಿ ಪಾಲ್ಗೊಂಡು ಮಳಿಗೆಗಳನ್ನು ತೆರೆಯಲಾಗುತ್ತಿದೆ.

ಹೆಚ್ಚಿನ ಮಾಹಿತಿಯನ್ನು ನೇರವಾಗಿ ಅಥವಾ ದೂರವಾಣಿ ಮೂಲಕ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವ ಕಾರ್ಯಾಲಯ ಅಥವಾ ಸಂಚಾಲಕರುಗಳಾದ ಶ್ರೀ ಎಂ. ಚನ್ನಮಲ್ಲಿಕಾರ್ಜುನ, ಶ್ರೀ ಬಿ.ಎಂ. ಸದಾಶಿವಮೂರ್ತಿ, ಹಾಗೂ ಶ್ರೀ ಕೆ.ಎಲ್. ಬಸಪ್ಪನವರುಗಳನ್ನು ಕ್ರಮವಾಗಿ 0821–2548212–122, 9448773134, 9900504023, 9449489864 ದೂರವಾಣಿಗಳಲ್ಲಿ ಸಂಪರ್ಕಿಸಬಹುದಾಗಿದೆ.

# 52ನೆಯ ದನಗಳ ಜಾತ್ರೆ

ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯಲಿರುವ 52ನೆಯ ದನಗಳ ಜಾತ್ರೆಯನ್ನು ವ್ಯವಸ್ಥೆ ಮಾಡಲಾಗಿದೆ. ಪಾಲ್ಗೊಳ್ಳುವ ಜಾನುವಾರುಗಳು ತಂಗುವುದಕ್ಕೆ ಉತ್ತಮ ವ್ಯವಸ್ಥೆ ಇದೆ. ಜಾನುವಾರಗಳನ್ನು ಕೊಳ್ಳಲು ಮತ್ತು ಮಾರಲು ಅವಕಾಶವಿರುತ್ತದೆ. ಉತ್ತಮ ರಾಸುಗಳಿಗೆ ಆಕರ್ಷಕ ನಗದು ಬಹುಮಾನಗಳನ್ನು ನೀಡಲಾಗುವುದು.

ಪಶುಪಾಲನಾ ಇಲಾಖೆ ಹಾಗೂ ಪಶುವೈದ್ಯಕೀಯ ಇಲಾಖೆಗಳಿಂದ ದನಗಳಿಗೆ ಉಚಿತ ಆರೋಗ್ಯ ತಪಾಸಣೆ ಚುಚ್ಚುಮದ್ದು ಮತ್ತು ಜಂತುಹುಳು ನಿವಾರಕ ಔಷಧಿ ನೀಡಲಾಗುತ್ತದೆ. ರಾಸುಗಳನ್ನು ಕಟ್ಟಲು ಮುಂಚಿತವಾಗಿ ಜಾಗವನ್ನು ಕಾಯ್ದಿರಿಸಬಹುದಾಗಿದೆ. ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಇರುತ್ತದೆ. ರೈತಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ರಾಸುಗಳೊಡನೆ ಆಗಮಿಸಿ, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕೋರಿದೆ.

ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ನೇರವಾಗಿ ಅಥವಾ ದೂರವಾಣಿ ಮೂಲಕ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವ ಕಾರ್ಯಾಲಯದಲ್ಲಿ ಅಥವಾ ಸಂಚಾಲಕರುಗಳಾದ ಶ್ರೀ ಹೆಚ್.ಎನ್. ನಂಜಪ್ಪ ಹಾಗೂ ಶ್ರೀ ಬಿ.ಎಂ. ಸಿದ್ದಪ್ಪರವರುಗಳನ್ನು ಕ್ರಮವಾಗಿ 0821–2548212–122, 9845246023, 9686677590 ಈ ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರ ಪಡೆಯಬಹುದಾಗಿದೆ.

## ಗಾಂಧೀಜಿ ಕುರಿತ ರಸಪ್ರಶ್ನೆ ಸ್ಪರ್ಧೆ

ಜಾತ್ರಾ ಮಹೋತ್ಸವದಲ್ಲಿ "ಮಹಾತ್ಮ ಗಾಂಧೀಜಿಯವರ ಬದುಕು ಮತ್ತು ಸಂದೇಶ" ಎಂಬ ವಿಷಯ ಕುರಿತು ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿದೆ. ಮೈಸೂರು ನಗರದ ವಿವಿಧ ಮಹಿಳಾ ಬಳಗಗಳ ಇಬ್ಬರು ಸ್ಪರ್ಧಿಗಳನ್ನು ಒಳಗೊಂಡ ಆರು ತಂಡಗಳು ಭಾಗವಹಿಸಲು ಅವಕಾಶವಿದೆ. ವಿಜೇತ ತಂಡಗಳಿಗೆ ನಗದು ಬಹುಮಾನ, ಪ್ರಶಸ್ತಿಪತ್ರ ಹಾಗೂ ನೆನಪಿನ ಕೊಡುಗೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ನೇರವಾಗಿ ಅಥವಾ ದೂರವಾಣಿ ಮೂಲಕ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವ ಕಾರ್ಯಾಲಯ ಅಥವಾ ಸಂಚಾಲಕರಾದ ಶ್ರೀಮತಿ ರಾಧಾ ನೀಲಕಂಠ ಇವರನ್ನು 0821–2548212–122 8453275727 ಈ ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರ ಪಡೆಯಬಹುದಾಗಿದೆ.

## 24ರಂದು ಗಾಳಿಪಟ ಸ್ಪರ್ಧೆ



ಜಾತ್ರಾ ಮಹೋತ್ಸವದ ಪ್ರಯುಕ್ತ 24.1.2020 ಶುಕ್ರವಾರದಂದು ಪ್ರಾಥಮಿಕಶಾಲೆ, ಪ್ರೌಢಶಾಲೆ, ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗಾಗಿ ನಾಲ್ಕು ವಿಭಾಗಗಳಲ್ಲಿ ಗಾಳಿಪಟ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಪ್ರತಿ ವಿಭಾಗದಲ್ಲಿಯೂ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದು ವಿಜೇತರಾದವರಿಗೆ ಪಾರಿತೋಷಕ ಮತ್ತು ನಗದು ಬಹುಮಾನ ನೀಡಲಾಗುವುದು. ಇದಲ್ಲದೆ ಪ್ರತಿ ವಿಭಾಗದಲ್ಲಿಯೂ ಎರಡು ಸಮಾಧಾನಕರ ಬಹುಮಾನಗಳಿವೆ. ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೂ ಪ್ರಶಂಸಾ ಪತ್ರವನ್ನು ನೀಡಲಾಗುವುದು.

ಭಾಗವಹಿಸಲಿಚ್ಛಿಸುವ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಮಾಹಿತಿಗಾಗಿ ನೇರವಾಗಿ ಅಥವಾ ದೂರವಾಣಿ ಮೂಲಕ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವದ ಕಾರ್ಯಾಲಯವನ್ನು ಅಥವಾ ಸಂಚಾಲಕರಾದ ಶ್ರೀ ವಿ. ವಿನೋದ್‌ಕುಮಾರ್‌ರವರನ್ನು ಕ್ರಮವಾಗಿ 0821–2548212–122, 8884932916 ಈ ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರ ಪಡೆಯಬಹುದಾಗಿದೆ.

# ರಂಗೋಲಿ ಮತ್ತು ಸೋಬಾನೆಪದ ಸ್ಪರ್ಧೆ

ಜಾತ್ರಾ ಮಹೋತ್ಸವದ ಪ್ರಯುಕ್ತ ಜನವರಿ 21 ರಂದು ರಂಗೋಲಿ ಹಾಗೂ ಸೋಬಾನೆ ಪದ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.

ರಂಗೋಲಿ ಮತ್ತು ಸೋಬಾನೆಪದ ಎರಡೂ ಸ್ಪರ್ಧೆಗಳಲ್ಲಿ ಪುರುಷರು ಮತ್ತು ಮಹಿಳೆಯರು ಭಾಗವಹಿಸಬಹುದಾಗಿದೆ. ವಿಜೇತ ತಂಡಗಳಿಗೆ ನಗದು ಬಹುಮಾನ ಹಾಗೂ ಪ್ರಶಸ್ತಿಪತ್ರಗಳನ್ನು ನೀಡಲಾಗುವುದು. ಸೋಬಾನೆಪದ ಸ್ಪರ್ಧೆಯಲ್ಲಿ ಭಾಗವಹಿಸುವ ತಂಡಗಳಿಗೆ ನಿಯಮಾನುಸಾರ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತದೆ.





ಹೆಚ್ಚಿನ ಮಾಹಿತಿಗಾಗಿ ಜೆಎಸ್‌ಎಸ್ ಮಹಾವಿದ್ಯಾ ಪೀಠದ ಜಾತ್ರಾ ಮಹೋತ್ಸವದ ಕಾರ್ಯಾಲಯವನ್ನು ಅಥವಾ ಸಂಚಾಲಕರುಗಳಾದ ಶ್ರೀಮತಿ ಎನ್. ಜಮುನಾ ಅರಸ್ ಮತ್ತು ಶ್ರೀಮತಿ ನೇತ್ರಾವತಿ ಎಂ. ಎತ್ತಿನಮನಿಯವರನ್ನು ನೇರವಾಗಿ ಅಥವಾ ಕ್ರಮವಾಗಿ 08221–295018, 0821–2548212–122 9945102963, 9844662520 ಈ ದೂರವಾಣಿಗಳಲ್ಲಿ ಸಂಪರ್ಕಿಸಬಹುದಾಗಿದೆ.

# ಹೂ, ಹಣ್ಣು, ತರಕಾರಿ ಮೇಳೈಸಿದ ಕೃಷಿ ಮೇಳ



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿರುವ ಕೃಷಿ ಮೇಳದಲ್ಲಿ ಹನಿ ನೀರಾವರಿ ಪದ್ಧತಿಯಡಿಯಲ್ಲಿ ಭತ್ತದ ಬೆಳೆ ಪ್ರದರ್ಶನ, ಒಂದು ಕಣ್ಣಿನ ಕಬ್ಬಿನ ಸಸಿ ನಾಟಿ, ಪಾರಂಪರಿಕ ಬೆಳೆಗಳ ಪ್ರದರ್ಶನ, ಸಾವಯವ ತರಕಾರಿಗಳ ಪ್ರದರ್ಶನದಲ್ಲಿ ಬೆಂಡಿ (ಕೆಂಪು ಮತ್ತು ಹಸಿರು), ಬೀನ್ಸ್ (ನೇರಳೆ ಮತ್ತು ಹಸಿರು) ಹಾಗೂ ಕ್ಯಾರೆಟ್ (ಕಪ್ಪು ಮತ್ತು ಕೆಂಪು), ಒಂದು ಎಕರೆ ಕೃಷಿ ಬ್ರಹ್ಮಾಂಡ, 110ಕ್ಕೂ ಹೆಚ್ಚು ಬೆಳೆ ವೈವಿಧ್ಯ, ಪುಷ್ಪ ಪ್ರದರ್ಶನ–20 ಪ್ರಭೇದಗಳು, ಬಣ್ಣದ ದೊಣ್ಣೆ ಮೆಣಸಿನಕಾಯಿ (ಕೆಂಪು ಮತ್ತು ಹಳದಿ), ಚೆರ್ರಿ (ಸಣ್ಣ) ಟೊಮ್ಯಾಟೋ, ಹಸು, ಕುರಿ, ಮೇಕೆ ಕೋಳಿ ಹಾಗೂ ಮೀನು ತಳಿಗಳ ಪ್ರದರ್ಶನ, ಭತ್ತದಲ್ಲಿ ಹನಿ ನೀರಾವರಿ ಯಿಂದಾಗುವ ಪ್ರಯೋಜನಗಳು, ಶೇ. 50ರಷ್ಟು ನೀರಿನ ಉಳಿತಾಯ, ಶೇ. 80ರಷ್ಟು ನೀರು ಹಾಗೂ ಗೊಬ್ಬರ ಸದ್ಬಳಕೆ, ಇಳುವರಿಯಲ್ಲಿ ಶೇ. 25 ರಿಂದ 30ರಷ್ಟು ಹೆಚ್ಚಳ, ಮಣ್ಣಿನ ಗುಣಮಟ್ಟ ಕಾಪಾಡುಕೊಳ್ಳುವಿಕೆ

**ಒಂದು ಕಣ್ಣಿನ ಕಬ್ಬಿನ ಸಸಿಗಳ ನಾಟಿ:** ಸಸಿಗಳ ನಾಟಿ – 5000, ಅಂತರ 5'x2'x2' ಅಡಿ, ಹೆಚ್ಚಾದ ಗಾಳಿ ಮತ್ತು ಬೆಳಕಿನಿಂದ ಬೆಳವಣಿಗೆ ಚೆನ್ನಾಗಿ ಬರುತ್ತದೆ, ಆರೋಗ್ಯಕರವಾದ ಕಬ್ಬು ಮತ್ತು ಬೇಸಾಯ ಸುಲಭ, ಶೇ.40 ರಷ್ಟು ನೀರು ಉಳಿತಾಯ, ದ್ವಿದಳ ಧಾನ್ಯಗಳ ಅಂತರ ಬೆಳೆ, ಕಳೆಗಳ ಸಂಖ್ಯೆಕಡಿಮೆ, 20–25 ತೆಂಡೆ (9–10 ಜಲ್ಲೆ ಉತ್ಪತ್ತಿಯಾಗುತ್ತದೆ.).

**ವಿದೇಶಿ ಸೂಪರ್ ಫುಡ್:** ಚಿಯಾ: ಮಧ್ಯ ಅಮೇರಿಕ ಮೂಲದ ಪುದಿನ ಕುಟುಂಬಕ್ಕೆ ಸೇರಿದ ಬೆಳೆ. ಪೋಷಕಾಂಶ ಗಳ ಜೊತೆಗೆ ಅತಿ ಹೆಚ್ಚು ಓಮೇಗಾ ಆ್ಯಂಟಿಆಕ್ಸಿಡೆಂಟ ಗಳು ಮತ್ತು ಫೈಬರ್ ಹೊಂದಿರುವ ಬೊಜ್ಜು ನಿಯಂತ್ರಕಆಹಾರ. ಟೆಫ್: ಇಥಿಯೋಪಿಯಾ ಮೂಲದ ವಿಟಮಿನ್ ಸಿ ಹೊಂದಿರುವ ಏಕೈಕ ಪ್ರಾಚೀನ ಏಕದಳ ಧಾನ್ಯ. ಹೆಚ್ಚು ಕ್ಯಾಲ್ಸಿಯಂ ಹೊಂದಿದೆ ಮತ್ತು ಕಬ್ಬಿಣ, ಮ್ಯಾಗ್ನಿಷಿಯಂ, ವಿಟಮಿನ್ ಬಿ6 ಹಾಗು ಫೈಬರ್ ಹೊಂದಿದೆ.

ಜಾತ್ರಾ ಮಹೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವು ಕೃಷಿಮೇಳವನ್ನು ಕೃಷಿ ಹಾಗೂ ಪೂರಕ ಕೃಷಿ ಉದ್ಯಮಗಳ ನವನವೀನ ತಾಂತ್ರಿಕತೆಗಳು ಮತ್ತು ನಿರ್ವಹಣೆ ವಿಷಯಗಳನ್ನು ರೈತರಿಗೆ ಪರಿಚಯಿಸಲು ಹಮ್ಮಿಕೊಳ್ಳಲಾಗಿದೆ.



ಇದರಲ್ಲಿ ಸಮಗ್ರ ಬೆಳೆ ನಿರ್ವಹಣೆ, ನೆರಳು ಮನೆಯಲ್ಲಿ ತೋಟಗಾರಿಕೆ ಬೆಳೆಗಳ ಬೇಸಾಯ, ಪುಷ್ಪಕೃಷಿ, ತರಕಾರಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳು, ರೇಷ್ಮೆ ಕೃಷಿ, ಪಶುಸಂಗೋಪನೆ, ಸಮಗ್ರ ಕೀಟ/ರೋಗ ನಿರ್ವಹಣೆ ಮತ್ತು ಎರೆಹುಳು ಗೊಬ್ಬರದ ಉತ್ಪಾದನೆ ಇವೆಲ್ಲವುಗಳ ಪ್ರಾತ್ಯಕ್ಷಿಕೆಗಳಿರುತ್ತವೆ. ಸಿರಿಧಾನ್ಯಗಳು, ವಿದೇಶಿ ಸೂಪರ್ ಫುಡ್, ಭತ್ತದಲ್ಲಿ ಹನಿ ನೀರಾವರಿ ಪದ್ಧತಿ, ಒಂದು ಕಣ್ಣಿನ ಕಬ್ಬಿನ ನಾಟಿ, ತರಕಾರಿ ಬೆಳೆಗಳಲ್ಲಿ ಹನಿ ನೀರಾವರಿ ಮತ್ತು ಪ್ಲಾಸ್ಟಿಕ್ ಹೊದಿಕೆ, ವಿವಿಧ ಹೂ ಗಿಡಗಳ ಪ್ರಭೇದಗಳು, ಪಾರಂಪರಿಕ ಬೆಳೆಗಳು, ಸಾವಯವ ತರಕಾರಿ ತಳಿಗಳು ಮತ್ತು ವಿದೇಶಿ ತರಕಾರಿಗಳನ್ನು ವಿಶೇಷವಾಗಿ ಪ್ರದರ್ಶಿಸಲಾಗುವುದು.

ಕೃಷಿಮೇಳದಲ್ಲಿ ಸುಧಾರಿತ ತಳಿಗಳ ಬಿತ್ತನೆ ಬೀಜ, ತೋಟಗಾರಿಕೆ ಸಸಿಗಳು ಹಾಗೂ ಎರೆಗೊಬ್ಬರ / ಎರೆಹುಳು ಮಾರಾಟದ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಕೃಷಿ, ತೋಟಗಾರಿಕೆ, ರೇಷ್ಮೆ ಕೃಷಿ, ಪಶುಸಂಗೋಪನೆ, ಅರಣ್ಯ, ಮೀನುಗಾರಿಕೆ, ಜಲಾನಯನ ಅಭಿವೃದ್ಧಿ ಹಾಗೂ ಕೃಷಿ ಮಾರುಕಟ್ಟೆ ಇಲಾಖೆಗಳು, ಕೃಷಿ ವಿಶ್ವವಿದ್ಯಾಲಯಗಳು, ರಾಜ್ಯ ಬೀಜ ನಿಗಮ, ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಕೃಷಿ ಪರಿಕರಗಳ ಉತ್ಪಾದಕರು ಹಾಗೂ ವಿತರಕರುಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಶ್ರೀ ಸತೀಶ್.ಎಸ್ ರವರನ್ನು ದೂರವಾಣಿ (9886493153) ಮೂಲಕ ಸಂಪರ್ಕಿಸಬಹುದು.

**ಬೆಳೆದು ನಿಂತಿವೆ ತರಾವರಿ ತರಕಾರಿ:** ಈ ಸಾಲಿನ ಕೃಷಿ ಮೇಳದಲ್ಲಿ ಪ್ರತಿ ವರ್ಷದಂತೆ ಅನೇಕ ಬೆಳೆಗಳ ಸಜೀವ ಪ್ರಾತ್ಯಕ್ಷಿಕೆ ತಾಕುಗಳನ್ನು ಸಿದ್ಧಪಡಿಸಲಾಗಿದೆ. ಒಂದು ಎಕರೆ ಕೃಷಿ ಬ್ರಹ್ಮಾಂಡದಲ್ಲಿ 117 ಬೆಳೆಗಳನ್ನು ಬೆಳೆಯಲಾಗಿದೆ. ಅಲ್ಲದೇ, 16 ವಿವಿಧ ದೀರ್ಘಾವಧಿ ಬೆಳೆ, 92 ಅಲ್ಪಾವಧಿ ಬೆಳೆಗಳನ್ನು ಬೆಳೆಯಲಾಗಿದೆ. ಅಲ್ಲದೆ, ತೋಟಗಾರಿಕೆ ಬೆಳೆಗಳ ಕ್ಷೇತ್ರವನ್ನು ವಿಸ್ತರಿಸಿ ಸುಮಾರು 30 ತರಕಾರಿ ಬೆಳೆಗಳು, 16 ವಿದೇಶಿ ತರಕಾರಿಗಳು, 2 ಬಣ್ಣದ ದೊಣ್ಣೆ ಮೆಣಸಿನಕಾಯಿ, 7 ಪರಂಪರಿಕಾ ಬೆಳೆಗಳು ಹಾಗೂ ಚೆರ್ರಿ ಟಮಾಟೊ ಬೆಳೆಯನ್ನು ಬೆಳೆಯಲಾಗಿದ್ದು ಇದು ರೈತರಿಗೆ, ನಗರವಾಸಿ ಭಕ್ತರಿಗೆ ಹಾಗೂ ವಿದ್ಯಾರ್ಥಿಗಳಿಗೆ ಬೆಳೆ ವೈವಿಧ್ಯತೆಯ ಒಂದು ಅಮೋಘ ಪ್ರದರ್ಶನವಾಗಲಿದೆ. ಈ ವರ್ಷ ವಿಶೇಷವಾಗಿ ಭತ್ತದಲ್ಲಿ ಹನಿ ನೀರಾವರಿ ಪದ್ಧತಿ, ಒಂದು ಕಣ್ಣಿನ ಕಬ್ಬಿನ ನಾಟಿ, ಸಾವಯವ ತರಕಾರಿಗಳು, 20 ಪ್ರಭೇಧಗಳನ್ನೊಳಗೊಂಡ ಪುಷ್ಪ ತೋಟ, ವಿದೇಶಿ ಸೂಪರ್‌ಫುಡ್ (ಚಿಯಾ ಮತ್ತು ಟೆಫ್) ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಹನಿ ನೀರಾವರಿ ಮತ್ತು ಪ್ಲಾಸ್ಟಿಕ್ ಹೊದಿಕೆ ಪ್ರಾತ್ಯಕ್ಷಿಕೆಗಳನ್ನು ಮಾಡಲಾಗಿದೆ.



## ಶುದ್ಧ ಕುಡಿಯುವ ನೀರು

ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾದಿಗಳಿಗೆ ಆಯಾ ಕಾರ್ಯಕ್ರಮಗಳು ಜರಗುವ ಹಾಗೂ ದಾಸೋಹ ನಡೆಯುವ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

ಉಚಿತ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಸ್ವಯಂ ಸೇವಕರು ವಿತರಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

# ಸಿಂಗಾರಗೊಂಡ ಸುತ್ತೂರು



ಜಾತ್ರಾ ಮಹೋತ್ಸವದ ಅಂಗವಾಗಿ ಸುತ್ತೂರು ಶ್ರೀಕ್ಷೇತ್ರವು ತಳಿರು–ತೋರಣ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದೆ. ಕಳೆದ ಬಾರಿಯಂತೆಯೇ ಈ ಬಾರಿಯು ಅಲಂಕರಿಸುವುದನ್ನು ಮೈಸೂರಿನ 'ಷರೀಫ್ ಫರ್ನಿಚರ್ಸ್'ನ ಶ್ರೀ ಷರೀಫ್‌ರವರು ನಿರ್ವಹಿಸುತ್ತಿದ್ದಾರೆ. ದೀಪಾಲಂಕಾರ, ವೇದಿಕೆ ಅಲಂಕಾರ, ಶಾಮಿಯಾನದಂತಹ ಕೆಲಸಗಳನ್ನು ವಹಿಸಿಕೊಂಡಿದ್ದಾರೆ ಇವರೊಂದಿಗೆ ಸುತ್ತೂರಿನ ಶ್ರೀ ಮಹದೇವರವರು ಈ ಕಾರ್ಯದಲ್ಲಿ ಒಂದು ಭಾಗವನ್ನು ನಿರ್ವಹಿಸಿದ್ದಾರೆ. 120 ಆರ್ಟ್ ಪಿಲ್ಲರ್‌ಗಳು, 6 ಎಂಟ್ರೇನ್ಸ್ ಆರ್ಚ್‌ಗಳನ್ನು ನಿರ್ಮಿಸಿದ್ದಾರೆ. 15 ಜನ ಆರ್ಟ್‌ವರ್ಕ್, 70 ಜನರನ್ನು ಸ್ಟೇಜ್‌ವರ್ಕ್‌ಗೆ ನೇಮಿಸಿಕೊಂಡಿದ್ದಾರೆ. ವಿನೂತನ ಮಾದರಿಯಲ್ಲಿ ಸುತ್ತೂರು ಜಾತ್ರೆ ಕಂಗೊಳಿಸಲಿದೆ. ಹಲವು ಕಡೆ ಜರುಗುವ ಕಾರ್ಯಕ್ರಮಗಳಿಗೆ ಶಾಮಿಯಾನ ಹಾಗೂ ವಿದ್ಯುತ್ ದೀಪಗಳೊಂದಿಗೆ ಸಿಂಗರಿಸಲಾಗಿದೆ. ವಿಶೇಷವಾಗಿ ರಾತ್ರಿಯ ವೇಳೆ ಜನರಿಗೆ ತೊಂದರೆಯಾಗದಂತೆ ಅಲ್ಲಲ್ಲಿ 'ಎಲ್‌ಇಡಿ' ಬಲ್ಬ್‌ಗಳನ್ನು ಅಳವಡಿಸಲಾಗಿದೆ. ಈ ಬಾರಿ ವಸ್ತು ಸಂಗ್ರಹಾಲಯದ ಹೊಸ ಕಟ್ಟಡಕ್ಕೆ ಹಾಗೂ ಶ್ರೀಮಠಕ್ಕೆ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಕರ್ತೃಗದ್ದುಗೆ ಅಲ್ಲದೆ ನದಿಯ ಬಳಿ ಸೇರಿದಂತೆ ವಿವಿಧ ವೇದಿಕೆಗಳಿಗೆ ದೀಪಾಲಂಕಾರವನ್ನು ಮಾಡಲಾಗಿದೆ. ಹಲವಾರು ಕಾರ್ಯಕ್ರಮಗಳಿಂದ ಜರಗುವ ಜಾತ್ರೆಯನ್ನು ಜನರ ಕಣ್ಮನ ತುಂಬಿಕೊಳ್ಳುವಂತೆ ಕಂಗೊಳಿಸಲಿದೆ. – ಅನನ್ಯ ಜಿ ಎಸ್

## ಗ್ರಾಮೀಣ ಆಟಗಳ ಸ್ಪರ್ಧೆ



ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮೀಣ ಪ್ರತಿಭೆಗಳಿಗೆ ಅವಕಾಶ ಕಲ್ಪಿಸಿಕೊಡಲು ಪುರುಷರಿಗೆ ಹಾಗೂ ಮಹಿಳೆಯರಿಗೆ ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಅಳಿಗುಳಿಮನೆ, ಅಣ್ಣೆಕಲ್ಲು ಮುಂತಾದ ದೇಸಿ ಆಟಗಳ ಸ್ಪರ್ಧೆಗಳನ್ನು 23 ಮತ್ತು 24 ರಂದು ಏರ್ಪಡಿಸಲಾಗಿದೆ. ವಿಜೇತರಾದವರಿಗೆ ನಗದು ಬಹುಮಾನ, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸುವವರು ಹೆಚ್ಚಿನ ಮಾಹಿತಿಗಾಗಿ ನೇರವಾಗಿ ಅಥವಾ ದೂರವಾಣಿ ಮೂಲಕ ಜಾತ್ರಾ ಮಹೋತ್ಸವದ ಕಾರ್ಯಾಲಯವನ್ನು ಹಾಗೂ ಸಂಚಾಲಕರುಗಳಾದ ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ, ಶ್ರೀ ಕೆ.ಎಸ್. ಮಲ್ಲರಾಜೇ ಅರಸ್ ಮತ್ತು ಶ್ರೀ ಪಿ.ಎಂ. ನಟರಾಜಮೂರ್ತಿಯವರನ್ನು ಕ್ರಮವಾಗಿ 0821–2548212–122, 7259800344, 9663452892, 9945244582 ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರ ಪಡೆಯಬಹುದಾಗಿದೆ.

## ಜಾತ್ರೆಯಲ್ಲಿ ಚಿತ್ರಸಂತೆ

ಜಾತ್ರಾ ಮಹೋತ್ಸವದ ಪ್ರಯುಕ್ತ ಕಲಾವಿದರುಗಳನ್ನು ಸಮಾವೇಶಗೊಳಿಸಿ ಕಲಾಕೃತಿಗಳ ಪ್ರದರ್ಶನ, ಮಾರಾಟ ಹಾಗೂ ಸ್ಥಳದಲ್ಲೇ ಸಾರ್ವಜನಿಕರ ಭಾವಚಿತ್ರ ರಚನೆಮಾಡಿ ಮಾರಾಟ ಮಾಡುವ ವ್ಯವಸ್ಥೆಯನ್ನು ಜಾತ್ರೆಯ ಎಲ್ಲಾ ದಿನಗಳಲ್ಲಿಯೂ ಏರ್ಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಚಾಲಕರುಗಳಾದ ಕು. ಬಿ. ಸುನೀತಾ, ಶ್ರೀ ಡಿ. ಕುಬೇರಪ್ಪ ಹಾಗೂ ಶ್ರೀ ಜಿ.ಆರ್. ನಿಡವಣಿಯವರನ್ನು ಕ್ರಮವಾಗಿ 0821–2548212–122, 9844079269, 9480281097, 9448957905, ಈ ದೂರವಾಣಿಗಳಲ್ಲಿ ಸಂಪರ್ಕಿಸಬಹುದಾಗಿದೆ.

## ರಾಜ್ಯ ಮಟ್ಟದ ಭಜನಾ ಸ್ಪರ್ಧೆ

ಜಾತ್ರಾ ಮಹೋತ್ಸವದ ಪ್ರಯುಕ್ತ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರಾಜ್ಯಮಟ್ಟದ 28ನೆಯ ಭಜನಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಭಜನಾ ಸ್ಪರ್ಧೆಯಲ್ಲಿ ಪುರುಷರ ತಂಡ, ಮಕ್ಕಳ ತಂಡ, ನಗರ ಮಹಿಳಾ ತಂಡ, ಗ್ರಾಮಾಂತರ ಮಹಿಳಾ ತಂಡ, ಏಕತಾರಿ ಪುರುಷರ ತಂಡ, ಏಕತಾರಿ ಮಹಿಳಾ ತಂಡಗಳಿಗೆ ಸ್ಪರ್ಧೆ ಏರ್ಪಡಿಸಲಾಗಿದೆ. ಬೇರೆ ರಾಜ್ಯಗಳ ಪುರುಷ ಮತ್ತು ಮಹಿಳಾ ಭಜನಾ ತಂಡಗಳಿಗೆ ಭಾಗವಹಿಸುವ ತಂಡಗಳ ಸಂಖ್ಯೆಯನ್ನು ಗಮನಿಸಿ ಪ್ರತ್ಯೇಕ ಸ್ಪರ್ಧೆ ಏರ್ಪಡಿಸಿ ಸೂಕ್ತ ಬಹುಮಾನಗಳನ್ನು ನೀಡಲಾಗುವುದು. ರಾಜ್ಯ ಹಾಗೂ ನೆರೆ ರಾಜ್ಯಗಳ ತಂಡಗಳು ಭಾಗವಹಿಸಬಹುದಾಗಿದೆ.

ವಿಜೇತ ತಂಡಗಳಿಗೆ ನಗದು ಬಹುಮಾನ, ನೆನಪಿನ ಕೊಡುಗೆ ಹಾಗೂ ಪ್ರಶಸ್ತಿಪತ್ರಗಳನ್ನು, ಸ್ಪರ್ಧೆಯಲ್ಲಿ ಭಾಗವಹಿಸುವ ಎಲ್ಲಾ ತಂಡಗಳಿಗೆ ಪ್ರಶಂಸಾ ಪತ್ರ ಹಾಗೂ ಪ್ರಯಾಣ ಭತ್ಯೆಯನ್ನು ನಿಯಮಾನುಸಾರ ನೀಡಲಾಗುತ್ತದೆ ಹಾಗೂ ಎಲ್ಲ ತಂಡಗಳಿಗೆ ಉಚಿತ ವಸತಿ ಹಾಗೂ ಪ್ರಸಾದ ವ್ಯವಸ್ಥೆ ಇರುತ್ತದೆ.

ಸ್ಪರ್ಧೆಯಲ್ಲಿ ಪಾಲ್ಗೊಳ್ಳ ಬಯಸುವ ಭಜನಾ ತಂಡಗಳವರು ಹೆಚ್ಚಿನ ಮಾಹಿತಿಗಾಗಿ ನೇರವಾಗಿ ಅಥವಾ ದೂರವಾಣಿ ಮೂಲಕ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವದ ಕಾರ್ಯಾಲಯವನ್ನು ಅಥವಾ ಸಂಚಾಲಕರುಗಳಾದ ಶ್ರೀ ವಿಶ್ವನಾಥ್ ಮತ್ತು ಡಾ. ಡಿ.ಎಂ. ಮಹೇಂದ್ರಮೂರ್ತಿಯವರನ್ನು ಕ್ರಮವಾಗಿ 0821–2548212, 9448800977, 9980224546 ದೂರವಾಣಿಗಳಲ್ಲಿ ಸಂಪರ್ಕಿಸಬಹುದಾಗಿದೆ.



## ರಾಜ್ಯಮಟ್ಟದ ಮಕ್ಕಳ ಚಿತ್ರಕಲಾ ಸ್ಪರ್ಧೆ

ಜಾತ್ರಾ ಮಹೋತ್ಸವದ ಪ್ರಯುಕ್ತ ಮಕ್ಕಳಿಗಾಗಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು 25 ಜನವರಿ 2020 ಶನಿವಾರದಂದು ಏರ್ಪಡಿಸಲಾಗಿದೆ.

ರಾಜ್ಯದ ಯಾವುದೇ ಭಾಗದ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಚಿತ್ರರಚನೆ ವಿಷಯ, 1 ರಿಂದ 2ನೇ ತರಗತಿ– ಮಕ್ಕಳ ವಿವೇಚನೆಗೆ ಬಿಟ್ಟಿದ್ದು, 3 ರಿಂದ 4ನೇ ತರಗತಿ– ಸಾಕು ಪ್ರಾಣಿಗಳು, 5 ರಿಂದ 7ನೇ ತರಗತಿ– ಪಾರಂಪರಿಕ ಉಡುಪುಗಳು, 8 ರಿಂದ 10ನೇ ತರಗತಿ– ಜಲ ಸಂರಕ್ಷಣೆ ಕುರಿತು ಚಿತ್ರ ಬಿಡಿಸಬಹುದಾಗಿದೆ.

ಸ್ಪರ್ಧಿಗಳಿಗೆ ಮತ್ತು ಪಾಲಕರಿಗೆ ಪ್ರಸಾದದ ಸೌಲಭ್ಯವನ್ನು ಕಲ್ಪಿಸಲಾಗುವುದು. ವಿಜೇತರಿಗೆ ಪಾರಿತೋಷಕ, ನಗದು ಹಾಗೂ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವದ ಕಾರ್ಯಾಲಯವನ್ನು ನೇರವಾಗಿ ಅಥವಾ ದೂರವಾಣಿ ಮೂಲಕ ಹಾಗೂ ಸಂಚಾಲಕರುಗಳಾದ ಶ್ರೀ ಡಿ. ಕುಬೇರಪ್ಪ ಹಾಗೂ ಶ್ರೀ ಜಿ.ಆರ್. ನಿಡವಣಿ ಅವರುಗಳನ್ನು ಕ್ರಮವಾಗಿ 0821–2548212–122, 9480281097, 9448957905 ಈ ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರ ಪಡೆಯಬಹುದಾಗಿದೆ.

# ವಿವಿಧ ಮಂಟಪಗಳ ಭೂಮಿಪೂಜೆ



ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ದಾಸೋಹ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಭಾಗೃಹ ಎಲ್ಲ ಮಂಟಪಗಳ ಭೂಮಿ ಪೂಜೆಯನ್ನು ಡಿಸೆಂಬರ್ 1 ಭಾನುವಾರದಂದು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಮಠಾಧೀಶರು, ಹರಗುರು ಚರಮೂರ್ತಿಗಳು, ಜಾತ್ರಾ ಮಹೋತ್ಸವದ ವಿವಿಧ ಸಮಿತಿಗಳ ಸಂಚಾಲಕರು, ಸುತ್ತಮುತ್ತಲ ಗ್ರಾಮಗಳ ಮುಖಂಡರು ಹಾಗೂ ಭಕ್ತಾದಿಗಳು ಭಾಗವಹಿಸಿದ್ದರು.

ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 34ನೆಯ ಪುಣ್ಯ ಸಂಸ್ಮರಣೆಯನ್ನು ಈ ಸಂದರ್ಭದಲ್ಲಿ ನೆರವೇರಿಸಲಾಯಿತು. ಪ್ರಾತ:ಕಾಲ ಕರ್ತೃ ಗದ್ದುಗೆ ಹಾಗೂ ರಾಜೇಂದ್ರ ಶ್ರೀಗಳ ಗದ್ದುಗೆಯಲ್ಲಿ ರುದ್ರಾಭಿಷೇಕ, ಅಷ್ಟೋತ್ತರ ಪ್ರಾಕಾರೋತ್ಸವಗಳು ನೆರವೇರಿದವು. ನಂತರ ಜಾತ್ರಾ ಮಹೋತ್ಸವದ ಸಮಿತಿಯ ಸಭೆ ಜರುಗಿ ಪೂರ್ವ ಸಿದ್ಧತೆಗಳ ಬಗೆಗೆ ಸಮಾಲೋಚಿಸಲಾಯಿತು. ವಿವಿಧ ಮಠಗಳ ಪೂಜ್ಯರುಗಳು, ವಿವಿಧ ಜಿಲ್ಲೆಗಳು ಹಾಗೂ ಸುತ್ತಮುತ್ತಲ ಗ್ರಾಮಗಳ ಗಣ್ಯರು ಹಾಗೂ ಭಕ್ತಾದಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಶ್ರೀ ಸುಬ್ಬಪ್ಪನವರು ಸ್ವಾಗತಿಸಿದರು. ಶ್ರೀ ಸಿ.ವಿ. ಬಸವರಾಜು ವಂದಿಸಿದರು. ಶ್ರೀ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು.

# ಭಕ್ತಾಧಿಗಳ ವಾಸ್ತವ್ಯಕ್ಕೆ ವ್ಯವಸ್ಥೆ

ಜಾತ್ರೆಗೆ ಆಗಮಿಸುವ ಭಕ್ತಾದಿಗಳಿಗೆ ಸುತ್ತೂರಿನಲ್ಲಿ ಉಳಿದುಕೊಳ್ಳಲು ತಾತ್ಕಾಲಿಕ ಕುಟೀರಗಳು ಮತ್ತು ವಸತಿ ಗೃಹಗಳ ವ್ಯವಸ್ಥೆ ಮಾಡಲಾಗಿದೆ. ಜಾತ್ರೆಯ ಸ್ವಯಂಸೇವಕರಿಗೆ, ವಸ್ತುಪ್ರದರ್ಶನದ ಸಿಬ್ಬಂದಿ ವರ್ಗಕ್ಕೆ, ಭಜನಾ ತಂಡದವರಿಗೆ ಹಾಗೂ ಪೊಲೀಸ್ ಸಿಬ್ಬಂದಿಯವರಿಗೆ ಹೀಗೆ ವಿವಿಧ ಭಾಗಗಳಲ್ಲಿ ವಸತಿ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಪ್ರತಿ ಕಟ್ಟಡದಲ್ಲೂ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ. ಸುಮಾರು 50 ಸಾವಿರ ಜನರ ವಾಸ್ತವ್ಯಕ್ಕಾಗಿ ತಾತ್ಕಾಲಿಕ ಕುಟೀರಗಳನ್ನು ನಿರ್ಮಿಸಲಾಗಿದೆ. ಒಟ್ಟು 14 ಕಡೆ ವಸತಿ ಕಲ್ಪಿಸಲಾಗಿದ್ದು, ಶ್ರೀ ಶಿವರಾತ್ರಿ ರಾಜೇಂದ್ರ ಶಿಕ್ಷಣ ಸಮುಚ್ಛಯ, ಬಸವೇಶ್ವರ ಬಾಲಕರ ವಿದ್ಯಾರ್ಥಿ ನಿಲಯ, ಅಕ್ಕ ಮಹಾದೇವಿ ಬಾಲಕಿಯರ ವಿದ್ಯಾರ್ಥಿನಿಲಯ (ಮಹಿಳೆಯರಿಗಾಗಿ), ಹಿರಿಯರ ಮನೆ, ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ, ದಾಸೋಹ ಭವನ, ಶ್ರೀ ರಾಜೇಂದ್ರ ಕೃಪಾ ಅತಿಥಿಗೃಹ, ಶ್ರೀ ಘನಲಿಂಗ



ಶಿವಯೋಗಿ ಅತಿಥಿಗೃಹ, ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲ, ಕೃಷಿ ವಿಜ್ಞಾನ ಕೇಂದ್ರ ವಸತಿಗೃಹ, ಶ್ರೀ ನಿಜಲಿಂಗ ಶಿವಚಾರ್ಯ ಕುಟೀರ, ಕಪಿಲ ಕುಟೀರ ಈ ಎಲ್ಲಾ ವಸತಿ ಗೃಹಗಳಲ್ಲಿ ಕುಡಿಯುವ ನೀರು, ಶೌಚಾಲಯ ಮತ್ತು ಸ್ನಾನ ಗೃಹಗಳ ಸೌಲಭ್ಯವಿದೆ. ಎಲ್ಲಾ ವಸತಿ ಗೃಹಗಳ ನಿರ್ವಹಣಾ ಕಾರ್ಯಕ್ಕಾಗಿ ಸುತ್ತೂರು ಶಿಕ್ಷಣ ಸಂಸ್ಥೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ನಿಯೋಜಿಸಲಾಗಿದೆ.

– ಆದರ್ಶ್ ಮತ್ತು ತೇಜ




ಛಾಯಾಚಿತ್ರಗಳು: ವಾಟಾಳ್ ಆನಂದ್, ಬಿ.ಎಸ್. ನಿಜಲಿಂಗಪ್ಪ, ಸುತ್ತೂರು ನಂಜುಂಡನಾಯಕ

# ಜಾತ್ರೆಯಲ್ಲಿ ನಿತ್ಯ ನಿರಂತರ ದಾಸೋಹ



ಜಾತ್ರಾ ಮಹೋತ್ಸವದ ಕೇಂದ್ರ ಉಗ್ರಾಣದಲ್ಲಿ ಪಡಿ ಪದಾರ್ಥಗಳಿಗೆ ಪೂಜೆ ನೆರವೇರಿಸಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳು, ವಾಟಾಳು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಶ್ರೀ ಚನ್ನಬಸವ ಸ್ವಾಮಿಗಳವರು ಹಾಗೂ ಶ್ರೀ ಗೌರಿಶಂಕರ್, ಶ್ರೀ ಎಸ್.ಪಿ. ಉದಯಶಂಕರ್, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ. ಎಂ.ಎಸ್. ಸರ್ಪಭೂಷಣ್ ಹಾಗೂ ಸಮಿತಿಯ ಸದಸ್ಯರುಗಳಿದ್ದಾರೆ.

ಜಾತ್ರೆಗೆ ಬರುವ ಭಕ್ತಾದಿಗಳಿಗೆ ಪ್ರತಿನಿತ್ಯ ಬೆಳಗ್ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ ಊಟದ ವ್ಯವಸ್ಥೆ ಕಲ್ಪಿಸ ಲಾಗಿದೆ, 6 ದಿನಗಳಂತೆ ಒಟ್ಟು 20 ಲಕ್ಷ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಸಂಚಾಲಕ ಪ್ರೊ. ಸುಬ್ಬಪ್ಪ ತಿಳಿಸಿದರು.

ಬೆಳಗ್ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ ಊಟಕ್ಕೆ ಅನ್ನ, ಸಾರು, ಹುಳಿ, ಪಾಯಸ ಹಾಗೂ ಇದರ ಜೊತೆಗೆ ಪ್ರತಿದಿನ ಊಟಕ್ಕೆ ಒಂದು ಸಿಹಿಯನ್ನು ನೀಡಲಾಗುವುದು. ಈ ಬಾರಿ ವಿಶೇಷವಾಗಿ ಗೋಧಿ ಮತ್ತು ಬೆಲ್ಲದಿಂದ ಮಾಡಿರುವ ಉತ್ತರ ಕರ್ನಾಟಕ ಶೈಲಿಯ ಮಾಗಳಿಪುಡಿಯನ್ನು ಊಟದ ಜೊತೆ ನೀಡಲಾಗುವುದು ಎಂದರು.

ಜಾತ್ರೆಗೆ ಆಗಮಿಸುವ ಸರ್ವರಿಗೂ ದಿನದ ಮೂರು ಒತ್ತು ಪ್ರಸಾದದ ವ್ಯವಸ್ಥೆ ಮಾಡಲಾಗಿದೆ. ದಾಸೋಹದ ಸಿದ್ಧತಾ ಕಾರ್ಯಗಳು ನಡೆದಿವೆ. ಮೈಸೂರು, ಊಟಿ, ಗುಂಡ್ಲುಪೇಟೆ, ಮಂಡ್ಯ, ಬೆಂಗಳೂರು ಇತರೆ ವಿವಿಧ ಭಾಗಗಳಿಂದ ತರಕಾರಿಗಳನ್ನು ದಾನಿಗಳು ಉಚಿತವಾಗಿ ನೀಡುತ್ತಿದ್ದಾರೆ. ಒಂದು ದಿನಕ್ಕೆ ಮೂರು ಲಾರಿಗಳಂತೆ ತರಕಾರಿಯೂ ಶ್ರೀ ಮಠಕ್ಕೆ ಬರುತ್ತದೆ. ಇದರ ಜೊತೆ ಗುಲ್ಬರ್ಗದಿಂದ 200 ಕ್ವಿಂಟಾಲ್ ಬೇಳೆಯನ್ನು ಹಾಗೂ ಸಾವಿರ ಕ್ವಿಂಟಾಲ್ ಅಕ್ಕಿಯನ್ನು ಭದ್ರಾವತಿಯಿಂದಲೂ ತರಿಸಿಕೊಳ್ಳಲಾಗಿದೆ. 150 ಕ್ವಿಂಟಾಲ್ ಸಾಂಬಾರ್ ಪುಡಿಯನ್ನು ತಯಾರಿಸಲಾಗಿದೆ ಹಾಗೂ 20 ಸಾವಿರ ಲೀ ಹಾಲು ಹಾಗೂ 20 ಸಾವಿರ ಲೀ ಮೊಸರನ್ನು ತರಿಸಿಕೊಳ್ಳಲಾಗುತ್ತದೆ. ಪ್ರಸಾದವನ್ನು ಸಿದ್ದಪಡಿಸಲು 500 ಜನರನ್ನು ನೇಮಕ ಮಾಡಲಾಗಿದೆ. ಜೆಎಸ್ಎಸ್ ಸಂಸ್ಥೆಗೆ ಸೇರಿರುವ ಸಿಬ್ಬಂದಿ ವರ್ಗದವರು ಹಾಗೂ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸುತ್ತ–ಮುತ್ತಲಿನ ಗ್ರಾಮಸ್ಥರು ಸ್ವಇಚ್ಛೆಯಿಂದ 6 ದಿನಗಳ ಕಾಲವು ಪ್ರಸಾದವನ್ನು ವಿತರಿಸುತ್ತಾರೆ. ಗದ್ದುಗೆಯ ಸಮೀಪದಲ್ಲಿರುವ ವಿಶಾಲವಾದ ಆವರಣದಲ್ಲಿ ಮಹಾದಾಸೋಹಕ್ಕೆ ವ್ಯವಸ್ಥೆ ಮಾಡಿದ್ದು ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ವಿಭಾಗಗಳ ವ್ಯವಸ್ಥೆ ಇದೆ. ಪ್ರಸಾದದ ವ್ಯವಸ್ಥೆಯು ವಿವಿಧ ಭಾಗದ ಐದು ಸ್ಥಳಗಳಲ್ಲಿ ನೆರವೇರುತ್ತದೆ. 50 ಒಲೆಗಳನ್ನು ನಿರ್ಮಿಸಿದ್ದು ಸೌದೆಗಳಿಂದ ಅಡುಗೆಯನ್ನು ತಯಾರಿಸಲಾಗುವುದು ಒಂದು ಬಾರಿಗೆ 100 ರಿಂದ 150 ಕ್ವಿಂಟಾಲ್ ಅನ್ನ ಮಾಡುವಷ್ಟು ಕೊಪ್ಪರಿಕೆಗಳ ವ್ಯವಸ್ಥೆಯಿದೆ. ಒಂದೇ ಬಾರಿಗೆ ಒಂದು ಲಕ್ಷ ಜನ ಸೇರಿದಂತೆ ಉಳಿದ ದಿನಗಳಿಗೆ 15 ಲಕ್ಷಕ್ಕೂ ಹೆಚ್ಚು ಜನರಿಗೆ ದಾಸೋಹದ ವ್ಯವಸ್ಥೆ ಮಾಡಲಾಗುತ್ತಿದೆ.

ಜಾತ್ರೆಗೆ ಸರ್ವರೂ ಬಂದು ಪ್ರಸಾದವನ್ನು ಸವಿಯುವುದರ ಜೊತೆಗೆ ಕೃಷಿ ಮೇಳ, ದನಗಳ ಜಾತ್ರೆ, ರಥೋತ್ಸವ, ವಸ್ತು ಪ್ರದರ್ಶನ, ಕುಸ್ತಿ ಪಂದ್ಯಾವಳಿ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದಾಗಿದೆ.

– ಪಿ. ಅನುಷ, ದೀಪಶ್ರೀ

## ಕುಸ್ತಿಪಟುಗಳಿಗೆ ಸಿದ್ಧವಾಗಿರುವ ಅಖಾಡ

ರಾಜಮಹಾರಾಜರಿಂದ ಹಾಗೂ ಮಠಮಾನ್ಯಗಳ ಪ್ರೋತ್ಸಾಹದಿಂದ ಕುಸ್ತಿ ಪಂದ್ಯಾವಳಿ ನಡೆದುಕೊಂಡು ಬರುತ್ತಿದೆ. ಅದರಲ್ಲೂ ದಕ್ಷಿಣ ಭಾರತದಲ್ಲಿ ಮೈಸೂರಿನ ಕುಸ್ತಿ ಪಂದ್ಯಾವಳಿಗೆ ವಿಶೇಷ ಸ್ಥಾನಮಾನವಿದೆ. ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ನಡೆಯುತ್ತಿರುವ ಕಿರಿಯರು ಮತ್ತು ಹಿರಿಯರ ಕುಸ್ತಿ ಪಂದ್ಯಾವಳಿಯು ಪ್ರತಿ ವರ್ಷ ವಿಶೇಷ ಆಕರ್ಷಣೆಯನ್ನು ಹೊಂದಿದೆ. ಜನವರಿ 25 ರಂದು ನಡೆಯಲಿರುವ 40ನೇ ರಾಷ್ಟ್ರಮಟ್ಟದ 50 ಜೊತೆ ನಾಡ ಕುಸ್ತಿ ಪಂದ್ಯಾವಳಿ ತುಂಬಾ ರೋಚಕವಾಗಿದೆ. ವಿವಿಧ ಜಿಲ್ಲೆಯ ಭಾಗಗಳಿಂದ ಆಗಮಿಸುವ ಉತ್ತಮ ಕುಸ್ತಿ ಪಟುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಹತ್ತು ವರ್ಷದೊಳಗಿನ ಕುಸ್ತಿ ಪಟುಗಳು ಭಾಗವಹಿಸುತ್ತಿರುವುದು ವಿಶೇಷವಾಗಿದೆ.



ಈ ಬಾರಿ ಕ್ರೀಡಾ ಜ್ಯೋತಿಯನ್ನು ನಂಜನಗೂಡಿನ ಮಾಜಿ ಕುಸ್ತಿಪಟು ಮಹದೇವುರವರಿಗೆ ಹಸ್ತಾಂತರಿಸಲಾಗುವುದು.

ಮಾರ್ಫೀಟ್ 1 ರಲ್ಲಿ ಗೆದ್ದವರಿಗೆ ನಗದು ಬಹುಮಾನದೊಂದಿಗೆ "ಸುತ್ತೂರು ಕೇಸರಿ" ಪ್ರಶಸ್ತಿ ನೀಡಲಾಗುವುದು. ಮಾರ್ಫೀಟ್ 2 ರಲ್ಲಿ ಗೆದ್ದವರಿಗೆ ನಗದು ಬಹುಮಾನದೊಂದಿಗೆ "ಸುತ್ತೂರು ಕುಮಾರ" ಪ್ರಶಸ್ತಿ ನೀಡಲಾಗುವುದು. ಭಾಗವಹಿಸಿದ ಎಲ್ಲಾ ಕುಸ್ತಿಪಟುಗಳಿಗೆ ಪ್ರಶಂಸಾ ಪತ್ರಗಳನ್ನು ನೀಡಲಾಗುವುದು.

– ಮದನ್ ಕೆ.ಪಿ




Printed by : Academy Newspapers Private Limited (Publishers of Star of Mysore and Mysooru Mithra)
15-C, Industrial 'A' Layout, Bannimantap, Mysore-570 015